ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 574/2018

| | | |
|---|---|---|
| ಹೆಸರು | – | ಮಂಜುನಾಥ |
| ತಂದೆಯ ಹೆಸರು | – | ಸುಕ್ರು ಹರಿಕಂತ್ರ |
| ವಯಸ್ಸು | – | 30 ವರ್ಷ |
| ಉದ್ಯೋಗ | – | ಮೀನುಗಾರಿಕೆ |
| ವಾಸ್ತವ್ಯ | – | ಬಂದರ್ ರೋಡ್ , ಶಶಿಹಿತ್ಲ, ಕುಮಟಾ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 1 –ನಾಗರಾಜ ಪುರುಷೋತ್ತಮ ಗಾವಡಿ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಅವರ ಅಣ್ಣನಿಗೆ ಬಹಳ ವರ್ಷಗಳಿಂದ ಪರಿಚಯಸ್ಥರಾಗಿರುತ್ತೀರಿ ಹಾಗೂ ಆತ್ಮೀಯನಾಗಿದ್ದು , ಹೀಗಿರುತ್ತಿರುವಲ್ಲಿ ನೀವು ಅವರ ಅಣ್ಣನೊಂದಿಗಿನ ಪರಿಚಯನಾತೆಯಿಂದ 2014 ನೇ ಇಸ್ವಿಯ ಎಪ್ರೀಲ್ ತಿಂಗಳ ಮೊದಲನೇಯ ವಾರದಲ್ಲಿ ಅವರ ಅಣ್ಣನನ್ನು ಭೇಟಿಯಾಗಿ ನಿಮಗೆ ನಿಮ್ಮ ಕುಟುಂಬದ ಗರ್ಜಿನ ಸಲುವಾಗಿ ಜರೂರಾಗಿ ಸರೂ. 1,50,000/– ಹಣವು ಬೇಕಾಗಿದೆ , ಸದ್ರಿ ಹಣವನ್ನು 6 ತಿಂಗಳು ಬಿಟ್ಟು ಕೊಡುತ್ತೇನೆ ,ಸದ್ರಿ ಹಣವನ್ನು ನಿಮಗೆ ಈಗ ಕೊಡಿ ಎಂತಾ ಭರವಸೆ ನೀಡಿ ಪರಿಪರಿಯಾಗಿ ಕೇಳಿಕೊಂಡಿದ್ದಕ್ಕೆ ಅವರ ಅಣ್ಣನು ನಿಮ್ಮೊಂದಿಗಿನ ಪರಿಚಯನಾತೆಯಿಂದ ನೀವು ಕೇಳಿದ ದಿನದಂದೇ ಅವರ ಅಣ್ಣನು ತನ್ನ ಕೆಲಸಕ್ಕೆ ಎಂತಾ ಕೂಡಿಟ್ಟ ಹಣ ರೂ . 1,50,000/– ವನ್ನು ನಗದಾಗಿ ನಿಮಗೆ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 3</u>** ಪಿಡಬ್ಲ್ಯೂ 1 – ಇವರು ಮುಂದುವರಿದು, ತದನಂತರ 6 ತಿಂಗಳು ಕಳೆದ ಬಳಿಕ ಅವರ ಅಣ್ಣನು ನಿಮ್ಮ ಬಳಿ ತಾನು ನೀಡಿದ ಹಣವನ್ನು ವಾಪಸ್ಸು ನೀಡುವಂತೆ ಕೇಳಿದಾಗ ನೀವು ತನ್ನ ಬಳಿ ಈಗ ಹಣವಿಲ್ಲ , ನಿಮಗೆ ಇನ್ನೊಂದು 6–7 ತಿಂಗಳ ಕಾಲಾವಕಾಶ ಕೊಡಿ , ನಿಮಗೆ 6–7 ತಿಂಗಳು ಬಿಟ್ಟು ಮಧ್ರಿ ಹಣವನ್ನು ಕೊಡುತ್ತೇನೆ ಎಂತಾ ಕೇಳಿಕೊಂಡಿದ್ದು ಅವರ ಅಣ್ಣನು ನಿಮ್ಮ ಮೇಲಿನ ನಂಬಿಕೆಯಿಂದ ನಿಮಗೆ ಇನ್ನೊಂದು ಅವಕಾಶವನ್ನು ನೀಡಿದ್ದು ಇರುತ್ತದೆ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 4</u>** ಪಿಡಬ್ಲ್ಯೂ 1 – ಇವರು ಮುಂದುವರಿದು, ತದನಂತರ 7 ತಿಂಗಳು ಕಳೆದ ಬಳಿಕ ಅವರ ಅಣ್ಣನು ಇನ್ನೊಮ್ಮೆ ನಿಮ್ಮ ಬಳಿ ತಾನು ನೀಡಿದ ಹಣವನ್ನು ಕೇಳಲಾಗಿ ನೀವು ಮತ್ತೆ ಅದೇ ರೀತಿ ಉತ್ತರ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 5</u>** ಪಿಡಬ್ಲ್ಯೂ 1 – ಇವರು ಮುಂದುವರಿದು, ಈ ರೀತಿ ಅವರ ಅಣ್ಣನು ನಿಮ್ಮ ಬಳಿ ತಾನು ಕೊಟ್ಟ ಹಣವನ್ನು ಪಡೆಯಲು ಪದೇ ಪದೇ ವಿಚಾರಿಸಿದರೂ ಕೂಡ ಅದಕ್ಕೆ ನೀವು ಇಂದು ನಾಳೆ ಎಂತಾ ಸತತ ನಾಲ್ಕು ವರ್ಷಗಳ ಕಾಲ ಸತಾಯಿಸಿ ಕಾಲಹರಣ ಮಾಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 6</u>** ಪಿಡಬ್ಲ್ಯೂ 1 – ಇವರು ಮುಂದುವರಿದು, ತದನಂತರ ಅವರ ಅಣ್ಣನು ನಿಮ್ಮಿಂದ ತೀರಾ ನೊಂದು ಹತಾಶನಾಗಿ ಮತ್ತೆ ನಿಮ್ಮ ಬಳಿ ತಾನು ನೀಡಿದ ಹಣವನ್ನು ವಾಪಸ್ಸು ಕೇಳಿದಾಗ

ನೀವು ಅವರ ಅಣ್ಣನ ಹತ್ತಿರ ತನ್ನ ಬಳಿ ಸಧ್ಯಕ್ಕೆ ನಗದು ಹಣ ಇಲ್ಲ , ತನ್ನ ಖಾತೆ ಇರುವ ಕಾರ್ಪೊರೇಶನ್ ಬ್ಯಾಂಕ್ , ಕುಮಟಾ ಶಾಖೆಯಲ್ಲಿ ಸಾಕಷ್ಟು ಹಣ ಇದೆ , ಅಲ್ಲಿ ನಗದಿಕರಿಸಿಕೊಳ್ಳಿ ಎಂಬ ಭರವಸೆ ನೀಡಿ ಒಂದು ಚೆಕ್ ನ್ನು ರೂ. 1,50,000/- ಕ್ಕೆ ದಿಃ 18-04-2018 ಎಂದು ನಮೂದಿಸಿ ಸಹಿ ಮಾಡಿ ನೀಡಿದ್ದು ಇರುತ್ತಿದ್ದು , ಸದರಿ ಚೆಕ್ ನಂ. 565104 ಆಗಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**<u>ಪ್ರಶ್ನೆ- 7</u>** ಪಿಡಬ್ಲ್ಯೂ 1 - ಇವರು ಮುಂದುವರಿದು, ನಿಮ್ಮ ಮೇಲಿನ ವಿಶ್ವಾಸದಿಂದ ಅವರ ಅಣ್ಣನು ಸದರಿ ಚೆಕ್ ನ್ನು ಸ್ವೀಕರಿಸಿದ್ದು ಇದ್ದು , ಈ ಚೆಕ್ ನೀಡುವ ವೇಳೆಯಲ್ಲಿ ನಿಮ್ಮ ಚೆಕ್ ನ ಮೇಲೆ ನಮೂದಿಸಿದ ದಿನಾಂಕದಂದು ಖಾತೆಯಲ್ಲಿ ನಗದೀಕರಣಕ್ಕೆ ಸಾಕಾಗುವಷ್ಟು ಹಣ ಜಮಾ ಇಡುವುದಾಗಿ ಭರವಸೆ ಸಹ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**<u>ಪ್ರಶ್ನೆ - 8</u>** ಪಿ ಡಬ್ಲ್ಯೂ 1 - ರವರು ಮುಂದುವರೆದು , ಹೀಗಿರುತ್ತಾ ನಿಮ್ಮಿಂದ ಅವರ ಅಣ್ಣನಿಗೆ ಸಂದಾಯವಾಗತಕ್ಕ ಹಣವನ್ನು ಪಡೆದುಕೊಳ್ಳುವ ಸಲುವಾಗಿ ಅವರ ಅಣ್ಣನು ಸದರಿ ಚೆಕ್ ನ್ನು ಅವರ ಅಣ್ಣನ ಖಾತೆ ಇರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ ಶಾಖೆಯಲ್ಲಿ ನಗದೀಕರಣಕ್ಕೆ ದಿಃ 23-04-2018 ರಂದು ಹಾಜರು ಪಡಿಸಿದಾಗ ಸದರ ಅವರ ಬ್ಯಾಂಕನವರು ನಿಮ್ಮ ಖಾತೆ ಇರುವ ಕಾರ್ಪೊರೇಶನ್ ಬ್ಯಾಂಕ್, ಕುಮಟಾ ಶಾಖೆಗೆ ಸದ್ರಿ ಚೆಕ್ ನ್ನು ನಗದೀಕರಣಕ್ಕೆಂತಾ ಕಳುಹಿಸಿದಾಗ ಸದ್ರಿ ಬ್ಯಾಂಕ್ ನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂತಾ ಫಂಡ್ಸ್ ಇನ್ ಸಫೀಷೀಯಂಟ್ ಎಂಬ ಹಿಂಬರಹದೊಂದಿಗೆ ಚೆಕ್ ನ್ನು ಮೆಮೋದೊಂದಿಗೆ ದಿಃ 25-04-2018 ರಂದು ಅವರ ಅಣ್ಣನ ಬಾಂಕರ್ ರಾದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ ಶಾಖೆಗೆ ನೀಡಿದ್ದು ಆ ಪ್ರಕಾರ ಸದರಿ ಶಾಖೆಯವರು ಹಿಂಬರಹದ ಮೆಮೋವನ್ನು ಚೆಕ್ ನ ಜೊತೆಗೆ ನೀಡಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**ಪ್ರಶ್ನೆ– 9** ಪಿಡಬ್ಲ್ಯೂ 1– ಇವರು ಮುಂದುವರಿದು, ತದನಂತರ ಅವರ ಅಣ್ಣನು ವಕೀಲರ ಮುಖಾಂತರ ನಿಮಗೆ ,ನೀವು ನೀಡಿದ ಚೆಕ್ ನಗದೀಕರಣವಾಗದೇ ಫಂಡ್ಸ್ ಇನ್ ಸಫೀಪಿಯಂಟ್ ಎಂಬ ಹಿಂಬರಹದೊಂದಿಗ ದಿಃ 25–04–2018 ರಂದು ವಾಪಸ್ಸು ಬಂದಿರುವುದೆಂತಲೂ, ಚೆಕ್ ನಲ್ಲಿ ನಮೂದು ಮಾಡಿದ ಹಣವನ್ನು ವಾಪಸ್ಸು ಕೊಡುವಂತೆಯೂ ನೊಂದಾಯಿತ ಅಂಚೆಯ ಮೂಲಕ ನಿಮಗೆ ದಿಃ 08–05–2018 ರಂದು ನೋಟಿಸು ನೀಡಿ ತಿಳಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 10** ಪಿಡಬ್ಲ್ಯೂ 1 – ಇವರು ಮುಂದುವರಿದು, ಸದ್ರಿ ನೋಟಿಸು ನಿಮಗೆ ದಿ 09–05–2018 ರಂದು ಜಾರಿಯಾಗಿದ್ದು ಸದ್ರಿ ನೋಟಿಸಿಗೆ ನೀವು ಯಾವುದೇ ಉತ್ತರ ನೀಡಿದ್ದು ಇರುವುದಿಲ್ಲ ಹಾಗೂ ನಿವು ಅವರ ಅಣ್ಣನಿಂದ ಪಡೆದುಕೊಂಡ ಹಣವನ್ನು ಈವರೆಗೂ ಹಿಂದಿರುಗಿಸದೇ ಬಾಕಿ ಇಟ್ಟುಕೊಂಡಿದ್ದು ಸದ್ರಿ ಬಾಕಿ ಇಟ್ಟುಕೊಂಡ ಹಣದ ಮರುಪಾವತಿಗಾಗಿ ನೋಟಿಸಿನಲ್ಲಿ ಹೇಳಿದ ಚೆಕ್ ನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 11** ಪಿಡಬ್ಲ್ಯೂ 1 – ಇವರು ಮುಂದುವರಿದು, ನೀವು ಚೆಕ್ ನೀಡಿದ ಸಮಯದಲ್ಲಿ ಅವರ ಅಣ್ಣನು ನೀವು ನೀಡಿದ ಆಶ್ವಾಸನೆಯಂತೆ ಚೆಕ್ ನಗದೀಕರಣವಾಗುತ್ತದೆ ಎಂಬ ಭರವಸೆಯೊಂದಿಗೆ ಚೆಕ್ ನ್ನು ನಗದೀಕರಣಕ್ಕೆಂತಾ ಬ್ಯಾಂಕಿಗೆ ಹಾಕಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 12** ಪಿಡಬ್ಲ್ಯೂ 1 – ಇವರು ಮುಂದುವರಿದು, ಆದರೆ ನೀವು ನಿಮ್ಮ ಮೇಲೆ ಅವರ ಅಣ್ಣನು ಇಟ್ಟಿದ್ದ ನಂಬಿಕೆಗೆ ದ್ರೋಹ ಬರೆದು ಈ ರೀತಿಯ ಮೋಸ , ವಂಚನೆ, ವಿಶ್ವಾಸ ಘಾತಕತನವನ್ನು ಅವರ ಅಣ್ಣನಿಗೆ ಎಸಗಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 13** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

**ಪ್ರಶ್ನೆ – 14** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 09-01-2026.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ